All India Radio: Bangalore
National Bulletin In Kannada
06.01.2026  19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಕೃತಕಬುದ್ಧಿಮತ್ತೆ ಕೇವಲ ಭವಿಷ್ಯದ ತಂತ್ರಜ್ಞಾನ ಅಲ್ಲ, ಮಾನವ ಜೀವನವನ್ನು ಮರುರೂಪಿಸುತ್ತಿರುವ ಪ್ರಬಲ ಸಾಧನ - ಕೇಂದ್ರ ಸಚಿವ ಅಶ್ವಿನಿ ವೈಷ್ಣವ್
- ಪ್ರತಿಜೀವಕಗಳ ಅತಿಯಾದ ಬಳಕೆ ಬಗ್ಗೆ ದೇಶದ ಪ್ರಮುಖ ವೈದ್ಯಕೀಯ ತಜ್ಞರ ಎಚ್ಚರಿಕೆ
- ಗುಣಮಟ್ಟದ ಪರಿಸರ ವ್ಯವಸ್ಥೆ ಬಲಪಡಿಸುವಲ್ಲಿ ಭಾರತೀಯ ಮಾನಕ ಸಂಸ್ಥೆಯ ಪಾತ್ರ ಮಹತ್ವದ್ದು - ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ
- ಮಲೇಷಿಯಾ ಓಪನ್ ಸೂಪರ್ ೭೫೦ ಬ್ಯಾಡ್ಮಿಂಟನ್ ಪಂದ್ಯ; ಸಿಂಗಾಪುರದ ಜಿಯಾ ಹೆಂಗ್ ಜೇಸನ್ ತೇಹ್ ವಿರುದ್ಧ ಜಯಗಳಿಸಿದ ಭಾರತದ ಲಕ್ಷ್ಯಸೇನ್

***************

ಆರೋಗ್ಯ ರಕ್ಷಣೆ, ಶಿಕ್ಷಣ, ಕೃಷಿ, ಉತ್ಪಾದನೆ, ಆಡಳಿತ ಮತ್ತು ಮೂಲಸೌಕರ್ಯದಂತಹ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆ-ಎಐ ಒಂದು ಪರಿವರ್ತನಾ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದು ಕೇಂದ್ರ ಐಟಿ ಮತ್ತು ವಾರ್ತಾ ಮತ್ತು ಪ್ರಸಾರ ಸಚಿವ ಅಶ್ವನಿ ವೈಷ್ಣವ್ ಹೇಳಿದ್ದಾರೆ.

ಜೈಪುರದಲ್ಲಿ ನಡೆದ ಕೃತಕ ಬುದ್ಧಿಮತ್ತೆ ಸಮ್ಮೇಳನದಲ್ಲಿ ವರ್ಚುವಲ್ ಮೂಲಕ ಮಾತನಾಡಿದ ಅವರು, ಎಐ ಕೇವಲ ಭವಿಷ್ಯದ ತಂತ್ರಜ್ಞಾನವಲ್ಲ, ಬದಲಿಗೆ ಈಗಾಗಲೇ ಮಾನವ ಜೀವನ ಮತ್ತು ಕೆಲಸದ ಮಾದರಿಗಳನ್ನು ಮರುರೂಪಿಸುತ್ತಿರುವ ಪ್ರಬಲ ಸಾಧನವಾಗಿದೆ. ಮುಂದಿನ ತಿಂಗಳು ಭಾರತದಲ್ಲಿ ಜಾಗತಿಕ ಕೃತಕಬುದ್ಧಿಮತ್ತೆ ಪರಿಣಾಮ ಕುರಿತ ಶೃಂಗಸಭೆ ನಡೆಯಲಿದೆ ಎಂದು ಅವರು ಘೋಷಿಸಿದರು.

ಮುಂದಿನ ವರ್ಷದೊಳಗೆ ಹತ್ತು ಲಕ್ಷ ಯುವಕರು ಮತ್ತು ಸಣ್ಣ ಉದ್ಯಮಿಗಳು ಎಐ ಕೌಶಲ್ಯಗಳನ್ನು ಪಡೆಯುತ್ತಾರೆ. ಭಾರತವು ಎಐನಲ್ಲಿ ಸುಮಾರು ೭೦ ಶತಕೋಟಿ ಡಾಲರ್‌ಗಳ ಹೂಡಿಕೆ ಮಾಡುತ್ತಿದೆ. ಈ ಭಾರತ ಕೃತಕಬುದ್ಧಿಮತ್ತೆ ಅಭಿಯಾನ ಹಲವಾರು ಹೊಸ ಪ್ರಯೋಗಗಳು, ಹೊಸ ಅನ್ವಯಿಕೆಗಳು ಮತ್ತು ಹೊಸ ತಂತ್ರಜ್ಞಾನ ಅಭಿವೃದ್ಧಿ ಯೋಜನೆಗಳನ್ನು ಒಳಗೊಂಡಿದೆ ಎಂದು ಅವರು ತಿಳಿಸಿದರು.

ಧ್ವನಿ: ಅಶ್ವಿನಿ ವೈಷ್ಣವ್ ೨೦ ಸೆಕೆಂಡ್

***************

ದೇಶದ ಪ್ರಮುಖ ವೈದ್ಯಕೀಯ ತಜ್ಞರು ಪ್ರತಿಜೀವಕಗಳ ಅತಿಯಾದ ಬಳಕೆ ಮತ್ತು ಅದರಿಂದ ಉಂಟಾಗುವ ಆಂಟಿಮೈಕ್ರೊಬಿಯಲ್ ಪ್ರತಿರೋಧದ ಸಮಸ್ಯೆಯ ವಿರುದ್ಧ ಎಚ್ಚರಿಕೆ ನೀಡಿದ್ದಾರೆ.

ಕಳೆದ ತಿಂಗಳ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವೈದ್ಯರ ಸರಿಯಾದ ಸಲಹೆಯೊಂದಿಗೆ ಜನರು ಪ್ರತಿಜೀವಕಗಳನ್ನು ತರ್ಕಬದ್ಧವಾಗಿ ಬಳಸಬೇಕೆಂದು ಒತ್ತಾಯಿಸಿದ್ದಾರೆ.

ಆಕಾಶವಾಣಿಯೊಂದಿಗೆ ಮಾತನಾಡಿದ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಏಮ್ಸ್‌ನ ಸೂಕ್ಷ್ಮ ಜೀವವಿಜ್ಞಾನ ವಿಭಾಗದ ಮುಖ್ಯಸ್ಥ ಡಾ. ಬಿಮಲ್ ಕುಮಾರ್ ದಾಸ್, ಅನೇಕ ಬ್ಯಾಕ್ಟೀರಿಯಾಗಳು ಸಾಮಾನ್ಯವಾಗಿ ಬಳಸುವ ಪ್ರತಿಜೀವಕಗಳಿಗೆ ನಿರೋಧಕವಾಗಿರುವುದರಿಂದ ಅವು ನಿಷ್ಪರಿಣಾಮಕಾರಿಯಾಗಿವೆ ಎಂದು ಪ್ರತಿಪಾದಿಸಿದರು.

***************

ಭಾರತೀಯ ಮಾನಕ ಸಂಸ್ಥೆ-ಬಿಐಎಸ್ ಕೇವಲ ಒಂದು ಸಂಸ್ಥೆಯಲ್ಲ, ರಾಷ್ಟ್ರದ ಪಯಣವನ್ನು ರೂಪಿಸಿರುವ ಶಕ್ತಿಶಾಲಿ ಪರಂಪರೆಯಾಗಿದೆ ಎಂದು ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವ ಪ್ರಲ್ಹಾದ್ ಜೋಶಿ ಹೇಳಿದ್ದಾರೆ.

ನವದೆಹಲಿಯಲ್ಲಿ ನಡೆದ ಬಿಐಎಸ್‌ನ ೭೮ನೇ ಸ್ಥಾಪನಾ ದಿನಾಚರಣೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ವ್ಯವಹಾರ ನಡೆಸುವ ಸುಲಭತೆಯನ್ನು ಬೆಂಬಲಿಸುವುದರೊಂದಿಗೆ ದೇಶದ ಗುಣಮಟ್ಟದ ಪರಿಸರ ವ್ಯವಸ್ಥೆಯನ್ನು ಬಲಪಡಿಸುವಲ್ಲಿ ಈ ಸಂಸ್ಥೆ ಪ್ರಮುಖ ಪಾತ್ರ ವಹಿಸಿದೆ. ಬಿಐಎಸ್‌ನ ಗುರುತು ಅನೇಕ ಕ್ಷೇತ್ರಗಳಲ್ಲಿ ನಂಬಿಕೆಯ ಸಂಕೇತವಾಗಿ ಹೊರಹೊಮ್ಮಿದ್ದು, ಕೃಷಿ, ಉತ್ಪಾದನಾ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಬೆಳವಣಿಗೆಗೆ ಕೊಡುಗೆ ನೀಡಿದೆ ಎಂದು ಅವರು ಹೇಳಿದರು.

ಧ್ವನಿ: ಪ್ರಲ್ಹಾದ್ ಜೋಶಿ

ಇದೇ ವೇಳೆ ಐಐಟಿ ಧಾರವಾಡ, ಐಐಟಿ ಪಾಲಕ್ಕಾಡ್ ಹಾಗೂ ಎನ್‌ಐಟಿ ಅರುಣಾಚಲ ಪ್ರದೇಶದೊಂದಿಗೆ ಒಪ್ಪಂದ ಪತ್ರಗಳನ್ನು ಡಿಜಿಟಲ್ ರೂಪದಲ್ಲಿ ವಿನಿಮಯ ಮಾಡಿಕೊಳ್ಳಲಾಯಿತು.

***************

ನವದೆಹಲಿಯಲ್ಲಿ "ಪೋಷಣಾ ಭದ್ರತೆ ಮತ್ತು ಅಪೌಷ್ಟಿಕತೆ ನಿವಾರಣೆಯಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಪಾತ್ರ" ಎಂಬ ಶೀರ್ಷಿಕೆಯ ಸಿಎಸ್‌ಆರ್ ಸಮಾವೇಶವನ್ನು ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಇಂದು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗರ್ಭಾವಸ್ಥೆಯ ಸಮಯದಲ್ಲಿ ಸಮರ್ಪಕ ಪೋಷಣೆಯನ್ನು ಖಚಿತಪಡಿಸುವುದರಿಂದ ಅಪೌಷ್ಟಿಕತೆಯನ್ನು ನಿರ್ಮೂಲನೆ ಮಾಡಬಹುದು. ಅಪೌಷ್ಟಿಕತೆಯನ್ನು ಪರಿಣಾಮಕಾರಿಯಾಗಿ ಕಡಿಮೆ ಮಾಡಲು ಅದರ ಮೂಲ ಕಾರಣಗಳನ್ನು ಪರಿಹರಿಸುವ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು.

ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಮಗ್ರ ಸರ್ಕಾರದ ದೃಷ್ಟಿಕೋನದೊಂದಿಗೆ ಕಾರ್ಯನಿರ್ವಹಿಸುತ್ತಿದ್ದು, ಅಪೌಷ್ಟಿಕತೆ ನಿರ್ಮೂಲನೆಗೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ಉಪಕ್ರಮಗಳೂ ಮಹತ್ವದ ಪಾತ್ರ ವಹಿಸಬಹುದು ಎಂದು ಸಚಿವರು ಹೇಳಿದರು.

***************

ದೇಶದ ಐದು ಶಾಸ್ತ್ರೀಯ ಭಾಷೆಗಳನ್ನು ಪ್ರತಿನಿಧಿಸುವ ೫೫ ಅಪರೂಪದ ಮತ್ತು ಅಮೂಲ್ಯವಾದ ಸಾಹಿತ್ಯ ಕೃತಿಗಳನ್ನು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಇಂದು ಬಿಡುಗಡೆ ಮಾಡಿದರು.

ಕನ್ನಡ, ತಮಿಳು, ತೆಲುಗು, ಮಲಯಾಳಂ ಮತ್ತು ಒಡಿಯಾ ಭಾಷೆಗಳ ಈ ಪುಸ್ತಕಗಳನ್ನು ಕೇಂದ್ರ ಭಾಷಾ ಸಂಸ್ಥೆಗಳು ಪ್ರಕಟಿಸಿವೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತದ ಭಾಷೆಗಳು ದೇಶದ ಸಮಾಜವನ್ನು ಏಕತೆಯಲ್ಲಿ ಬಂಧಿಸುತ್ತವೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎಲ್ಲಾ ಭಾರತೀಯ ಭಾಷೆಗಳೂ ರಾಷ್ಟ್ರೀಯ ಭಾಷೆಗಳೇ ಎಂದು ಒತ್ತಿ ಹೇಳಿದ್ದಾರೆ ಎಂದು ಅವರು ತಿಳಿಸಿದರು.

***************

ತಮಿಳುನಾಡಿನ ತಿರುಪರಂಕುಂದ್ರಂ ಬೆಟ್ಟದ ಮೇಲೆ ದೀಪ ಹಚ್ಚಲು ಅನುಮತಿಸಿದ ಮದ್ರಾಸ್ ಹೈಕೋರ್ಟ್ ತೀರ್ಪನ್ನು ಬಿಜೆಪಿ ಸ್ವಾಗತಿಸಿದೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಸಚಿವ ಹಾಗೂ ಪಕ್ಷದ ಹಿರಿಯ ನಾಯಕ ಪಿಯೂಷ್ ಗೋಯಲ್, ತಿರುಪರಂಕುಂದ್ರಂ ಬೆಟ್ಟದಲ್ಲಿರುವ ಪ್ರಾಚೀನ ದೇವಾಲಯದ ಭಕ್ತರಿಗೆ ಈ ತೀರ್ಪು ನ್ಯಾಯ ಒದಗಿಸಿದೆ ಎಂದು ಹೇಳಿದರು.

ದೀಪ ಹಚ್ಚಲು ಅನುಮತಿ ನೀಡಿದ್ದ ಏಕಸದಸ್ಯ ನ್ಯಾಯಪೀಠದ ಆದೇಶದ ವಿರುದ್ಧ ತಮಿಳುನಾಡು ಸರ್ಕಾರ ಮೇಲ್ಮನವಿ ಸಲ್ಲಿಸಿರುವುದು ಅತ್ಯಂತ ದುರದೃಷ್ಟಕರವಾಗಿದ್ದು, ಇದು ಹಿಂದೂ ವಿರೋಧಿ ಮನೋಭಾವವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ ಎಂದು ಅವರು ತಿಳಿಸಿದರು.

***************

ಉತ್ತರ ಪ್ರದೇಶದ ಕರಡು ಮತದಾರರ ಪಟ್ಟಿಯನ್ನು ಚುನಾವಣಾ ಆಯೋಗ ಇಂದು ಪ್ರಕಟಿಸಿದೆ.

ವಿಶೇಷ ಕ್ಷಿಪ್ರ ಮತದಾರರ ಪಟ್ಟಿ ಪರಿಷ್ಕರಣೆ-ಎಸ್‌ಐಆರ್ ನಂತರ ರಾಜ್ಯದ ೧೫ ಕೋಟಿ ೪೪ ಲಕ್ಷ ಮತದಾರರ ಪೈಕಿ ೧೨ ಕೋಟಿ ೫೫ ಲಕ್ಷ ಜನರ ಹೆಸರುಗಳನ್ನು ಮತದಾರರ ಕರಡು ಪಟ್ಟಿಯಲ್ಲಿ ಉಳಿಸಿಕೊಳ್ಳಲಾಗಿದೆ.

ಲಕ್ನೋದಲ್ಲಿಂದು ಈ ಕುರಿತು ಮಾಹಿತಿ ನೀಡಿದ ಉತ್ತರ ಪ್ರದೇಶ ಮುಖ್ಯ ಚುನಾವಣಾಧಿಕಾರಿ ನವದೀಪ್ ರಿನ್ವಾ, ಮತದಾರರು ಚುನಾವಣಾ ಆಯೋಗದ ಜಾಲತಾಣದಲ್ಲಿ ಎಪಿಕ್ ಸಂಖ್ಯೆ ನಮೂದಿಸಿ, ವಿವರ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

***************

ಪ್ರಧಾನಮಂತ್ರಿಯು ಪ್ರಗತಿಪರ ಆಡಳಿತ ಮತ್ತು ಸಮಯೋಚಿತ ಕಾರ್ಯಗತಗೊಳಿಸುವಿಕೆಯಿಗಾಗಿ ಆರಂಭಿಸಿದ ಪ್ರಮುಖ ವೇದಿಕೆ, 'ಪ್ರಗತಿ' ತನ್ನ ೫೦ನೇ ಸಭೆಯನ್ನು ಯಶಸ್ವಿಯಾಗಿ ನಡೆಸಿ ಪ್ರಮುಖ ಸಾಧನೆಯನ್ನು ತಲುಪಿದೆ.

೨೦೧೫ ರಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪ್ರಾರಂಭಿಸಿದ ನಂತರ, ಪ್ರಗತಿ ಮುಖ್ಯ ಮೂಲಸೌಕರ್ಯ ಯೋಜನೆಗಳು ಮತ್ತು ಸಾರ್ವಜನಿಕ ಅಳವಡಿಕೆಗಳ ವಿಷಯದಲ್ಲಿ ನೈಜ ಸಮಯದಲ್ಲಿ ಪರಿಶೀಲನೆ ಮತ್ತು ಪರಿಹಾರ ನೀಡುವ ಮೂಲಕ ಆಡಳಿತ ವ್ಯವಸ್ಥೆಯನ್ನು ಬದಲಾಯಿಸಿದೆ. ಈ ವೇದಿಕೆ ಸಹಕಾರಾತ್ಮಕ ಕೇಂದ್ರ-ರಾಜ್ಯ ಸಂಬಂಧವನ್ನು ಬಲಪಡಿಸುತ್ತದೆ.

ಕೇಂದ್ರ, ರಾಜ್ಯಗಳು ಮತ್ತು ಒಕ್ಕೂಟ ಸಚಿವಾಲಯಗಳನ್ನು ಒಂದು ಡಿಜಿಟಲ್ ಇಂಟರ್ಫೇಸ್‌ನಲ್ಲಿ ಒಟ್ಟುಗೂಡಿಸುತ್ತದೆ. ಒಂದು ದಶಕಕ್ಕಿಂತ ಹೆಚ್ಚು ಕಾಲದಲ್ಲಿ, ಪ್ರಗತಿ ನಿರ್ಧಾರ ತ್ವರಿತಗೊಳಿಸುವಿಕೆ, ಪ್ರಮುಖ ಮೂಲಸೌಕರ್ಯ ಯೋಜನೆಗಳಲ್ಲಿ ನಿಧಾನಗತಿಯ ಸಮಸ್ಯೆಗಳಿಗೆ ಪರಿಹಾರ ಮತ್ತು ದೃಢ ಹೊಣೆಗಾರಿಕೆಯ ಸಂಸ್ಕೃತಿಯನ್ನು ಬಲಪಡಿಸುವಲ್ಲಿ ಸಹಾಯ ಮಾಡಿದೆ.

***************

ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಇಂದು ಲಕ್ಸೆಂಬರ್ಗ್ ಪ್ರಧಾನಿ ಲುಕ್ ಫ್ರೀಡೆನ್ ಅವರನ್ನು ಭೇಟಿಯಾದರು.

ಭಾರತ ಮತ್ತು ಲಕ್ಸೆಂಬರ್ಗ್ ನಡುವೆ ಹಣಕಾಸು ಸೇವೆಗಳು, ಹೂಡಿಕೆಗಳು, ತಂತ್ರಜ್ಞಾನ ಮತ್ತು ನಾವೀನ್ಯತೆಗಳಲ್ಲಿ ಬೆಳೆಯುತ್ತಿರುವ ಸಹಕಾರದ ಕುರಿತು ಚರ್ಚಿಸಿರುವುದಾಗಿ ಸಾಮಾಜಿಕ ಜಾಲತಾಣದಲ್ಲಿ ಜೈಶಂಕರ್ ತಿಳಿಸಿದ್ದಾರೆ. ಭಾರತ - ಯುರೋಪಿಯನ್ ಒಕ್ಕೂಟ ಸಂಬಂಧಗಳಿಗೆ ಬೆಂಬಲ ನೀಡಿದ್ದಕ್ಕಾಗಿ ಅವರು ಲಕ್ಸೆಂಬರ್ಗ್ ಪ್ರಧಾನಿಗೆ ಧನ್ಯವಾದ ಅರ್ಪಿಸಿದರು.

***************

ಮಲೇಷ್ಯಾದ ಕೌಲಾಲಂಪುರದಲ್ಲಿ ನಡೆಯುತ್ತಿರುವ ಮಲೇಷ್ಯಾ ಓಪನ್ ಸೂಪರ್ ೭೫೦ ಬ್ಯಾಡ್ಮಿಂಟನ್ ಟೂರ್ನಮೆಂಟ್‌ನಲ್ಲಿ ಸಿಂಗಾಪುರದ ಜಿಯಾ ಹೆಂಗ್ ಜೇಸನ್ ತೆಹ್ ವಿರುದ್ಧ ಭಾರತದ ಖ್ಯಾತ ಶಟ್ಲರ್ ಲಕ್ಷ್ಯ ಸೇನ್ ಜಯ ಸಾಧಿಸಿದ್ದಾರೆ.

ಲಕ್ಷ್ಯ, ತೆಹ್ ಅವರನ್ನು ರೋಮಾಂಚಕ ಆರಂಭಿಕ ಪಂದ್ಯದಲ್ಲಿ ೨೧-೧೬, ೧೫-೨೧, ೨೧-೧೪ ಅಂತರದಲ್ಲಿ ಸೋಲಿಸಿದರು.

*******ಮುಕ್ತಾಯ*******